ಹುಲಸೂರು ಕ್ಷೇತ್ರದಲ್ಲಿ ಪಶುವೈದ್ಯಕೀಯ ಆಸ್ಪತ್ರೆಗಳು.

75(399)

ಶ್ರೀ ರಾಜೇಂದ್ರವರ್ಮ (ಹುಲ್‌ಸೂರ್): ಮಾನ್ಯ ಪಶು ಸಂಗೋಪನೆ ಮತ್ತು ಸಕ್ಕರೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

1. ಹುಲಸೂರು ವಿಧಾನ ಸಭಾಕ್ಷೇತ್ರದಲ್ಲಿರುವ ಪಶುವೈದ್ಯಕೀಯ ಆಸ್ಪತ್ರೆಗಳ ಸಂಖ್ಯೆ ಎಷ್ಟು (ಗ್ರಾಮವಾರು ಅಂಕಿಅಂಶಗಳನ್ನು ಒದಗಿಸುವುದು)

2. ಈ ಆಸ್ಪತ್ರೆಗಳಿಗೆ ಮಂಜೂರಾಗಿರುವ ವೈದ್ಯರುಗಳ ಸಂಖ್ಯೆ ಎಷ್ಟು? ಈ ಪೈಕಿ ಈಗ ಕಾರ್ಯ ನಿರ್ವಹಿಸುತ್ತಿರುವ ವೈದ್ಯರುಗಳ ಸಂಖ್ಯೆ ಎಷ್ಟು? ಖಾಲಿ ಇರುವ ವೈದ್ಯರು ಮತ್ತು ಇತರೆ ಸಿಬ್ಬಂದಿ ವರ್ಗದ ವಿವರಗಳೇನು? ಎಷ್ಟು ಅವಧಿಯಿಂದ ಮೇಲ್ಕಂಡ ಹುದ್ದೆಗಳು ಖಾಲಿ ಇವೆ? ಖಾಲಿ ಇರುವ ಹುದ್ದೆಗಳನ್ನು ಭರ್ತಿ ಮಾಡದೇ ಇರಲು ಕಾರಣಗಳೇನು?

3. ಈ ವಿಧಾನ ಸಭಾ ಕ್ಷೇತ್ರದಲ್ಲಿ ಇರುವ ಪಶು ವೈದ್ಯಕೀಯ ಆಸ್ಪತ್ರೆಗಳ ಪೈಕಿ ಎಷ್ಟು ಆಸ್ಪತ್ರೆಗಳು ಸ್ವಂತ ಕಟ್ಟಡದಲ್ಲಿ ಕಾರ್ಯ ನಿರ್ವಹಿಸುತ್ತಿವೆ ಹಾಗೂ ಎಷ್ಟು ಬಾಡಿಗೆ ಕಟ್ಟಡದಲ್ಲಿವೆ; ಹಾಗೂ ಎಷ್ಟು ಆಸ್ಪತ್ರೆಗಳು ಕಟ್ಟಡದ ಕೊರತೆಯನ್ನು ಎದುರಿಸುತ್ತಿವೆ?

4. ಈ ಕೊರತೆಯನ್ನು ನೀಗಲು ಸರ್ಕಾರ ಕೈಗೊಳ್ಳಲಿರುವ ಕ್ರಮಗಳೇನು?

ಶ್ರೀ ಎ.ಕೃಷ್ಣಪ್ಪ. (ಪಶು ಸಂಗೋಪನೆ ಮತ್ತು ಸಕ್ಕರೆ ಸಚಿವರು):

1. ಇಲ್ಲ

2. ಉದ್ಭವಿಸುವುದಿಲ್ಲ.

3. ಉದ್ಭವಿಸುವುದಿಲ್ಲ.

4. ಉದ್ಭವಿಸುವುದಿಲ್ಲ.

ರಾಜ್ಯದಲ್ಲಿ ವಾಹನಗಳಿಂದ ಪರಿಸರ ಮಾಲಿನ್ಯ.

78(435)

ಶ್ರೀ ಎ.ರಾಮದಾಸ್ (ಕೃಷ್ಣರಾಜಾ): ಮಾನ್ಯ ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ವಾಹನಗಳಿಂದ ವಾಯು ಮಾಲಿನ್ಯ ಶಬ್ದ ಮಾಲಿನ್ಯ ಮತ್ತು ಪರಿಸರ ಮಾಲಿನ್ಯ ಹೆಚ್ಚುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ? ಬಂದಿದ್ದಲ್ಲಿ ಪರಿಸರ ಸಮತೋಲನ ಕಾಯ್ದುಕೊಳ್ಳಲು ಏನು ಕ್ರಮ ಕೈಗೊಳ್ಳಲಾಗಿದೆ?

ಆ) ಆಸ್ಪತ್ರೆಗಳು ಮತ್ತು ನರ್ಸಿಂಗ್ ಹೋಂಗಳಿಂದ ಪರಿಸರ ಮಾಲಿನ್ಯವಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ? ಬಂದಿದ್ದಲ್ಲಿ ಯಾವ ರೀತಿ ಆಗುತ್ತಿದೆ? ಇದನ್ನು ತಡೆಯಲು ಕೈಗೊಳ್ಳುತಿರುವ ಕ್ರಮ ಏನು?

ಶ್ರೀ ಕೆ.ಹೆಚ್.ರಂಗನಾಥ್ (ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು):

ಅ) ಹೌದು. ವಾಹನಗಳಿಂದ ಉಂಟಾಗುವ ಮಾಲಿನ್ಯವನ್ನು ನಿಯಂತ್ರಿಸುವ ಅಧಿಕಾರವನ್ನು ಪೋಲೀಸ್ ಮತ್ತು ಸಾರಿಗೆ ಇಲಾಖೆಯವರಿಗೆ ಮೋಟಾರು ವಾಹನ ಕಾಯ್ದೆ 1989ರ ಪ್ರಕಾರ ನೀಡಲಾಗಿದೆ. ಪರಿಸರ ಸಂರಕ್ಷಣಾ ಕಾಯ್ದೆ, 1986 ಹಾಗೂ ವಾಯು (ನಿವಾರಣೆ ಮತ್ತು ನಿಯಂತ್ರಣ) ಕಾಯ್ದೆ, 1981ರ ಅಡಿಯಲ್ಲಿ ಪೋಲೀಸ್ ಹಾಗೂ ಸಾರಿಗೆ ಇಲಾಖೆಗಳಿಗೆ ನಿಗದಿಪಡಿಸಿದ ಗುಣಮಾನಕಕ್ಕಿಂತ ಹೆಚ್ಚಾಗಿ ಹೊಗೆಯನ್ನು ಹೊರಸೂಸುವ ವಾಹನಗಳನ್ನು ಬೆಂಗಳೂರು ನಗರದೊಳಕ್ಕೆ ಪ್ರವೇಶಿಸದಂತೆ ತಡೆಯಲು ಹಾಗೂ ಗುಣಮಾನಕಕ್ಕೆ ಸರಿಹೊಂದುವಂತಹ ವಾಹನಗಳನ್ನು ಮಾತ್ರ ನಗರವಲಯದೊಳಗೆ ಓಡಾಡಲು ಅನುಮತಿ ನೀಡಬೇಕೆಂದು ಸರ್ಕಾರಿ ಆಜ್ಞೆ ಸಂಖ್ಯೆ ಡಿಇಇ 70 ಇಎನ್‌ಪಿ 91 ದಿನಾಂಕ 6-9-91ರಲ್ಲಿ ನಿರ್ದೇಶನ ನೀಡಿದೆ. ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯು ಸಾರಿಗೆ ಇಲಾಖೆಗೆ ವಾಹನಗಳಿಂದ ಹೊರಬರುವ ಮಾಲಿನ್ಯ ಕಾರಕಗಳನ್ನು ತಪಾಸಣೆ ಮಾಡುವ ಯಂತ್ರೋಪಕರಣಗಳನ್ನು ನೀಡಿದೆ ಹಾಗೂ ಹಲವಾರು ಅಧಿಕಾರಿಗಳಿಗೆ ತರಬೇತಿಯನ್ನು ನೀಡಿದೆ.

ಬೆಂಗಳೂರು ನಗರದಲ್ಲಿ ವಾಹನಗಳಿಂದ ಉಂಟಾಗುವ ವಾಯು ಮಾಲಿನ್ಯವನ್ನು ಹತೋಟಿಗೆ ತರಲು ಸರ್ಕಾರದ ವತಿಯಿಂದ ಸಂಬಂಧಪಟ್ಟ ಇಲಾಖೆಗಳಿಗೆ ಸೂಕ್ತ ಕ್ರಮ ಕೈಗೊಳ್ಳಬೇಕೆಂದು ಸರ್ಕಾರದ ಸುತ್ತೋಲೆ ಸಂಖ್ಯೆ.ಎಫ್‌ಇಇ 229 ಇಎನ್‌ಪಿ 99 ದಿನಾಂಕ. 6-1-2000ರಲ್ಲಿ ಸೂಚನೆಗಳನ್ನು ನೀಡಿದೆ. ಮುಖ್ಯವಾಗಿ ಬೆಂಗಳೂರು ನಗರದಲ್ಲಿ ವಾಯು ಮಾಲಿನ್ಯದ ಬಗ್ಗೆ ಜನರಲ್ಲಿ ಅರಿವು ಮೂಡಿಸುವ ಉದ್ದೇಶದಿಂದ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯು 5 ಪರಿಸರ ವಾಹಿನಿ ವ್ಯಾನ್‌ಗಳನ್ನು ಫೆಬ್ರವರಿ 1999ರಲ್ಲಿ ಪ್ರಾರಂಭಿಸಿದೆ. ವಾಯು ಮಾಲಿನ್ಯ ಉಂಟು ಮಾಡುವ ವಾಹನಗಳ ತಪಾಸಣೆ ನಡೆಸಲು ಪ್ರಾದೇಶಿಕ ಸಾರಿಗೆ ಅಧಿಕಾರಿಗಳ ಹಾಗೂ ಪೋಲೀಸ್ ಇಲಾಖೆಗಳ ಸಹಕಾರವನ್ನು ಪಡೆಯಲಾಗುತ್ತಿದೆ. ವಾಹನಗಳಿಂದುಂಟಾಗುವ ಶಬ್ದ ಮಾಲಿನ್ಯಕ್ಕೆ ಮುಖ್ಯವಾಗಿ ವಾಹನಗಳನ್ನು ಸುಸ್ಥಿತಿಯಲ್ಲಿ ಇಡದೇ ಇರುವುದು, ವಾಹನಗಳ ದ್ವನಿ, ಆಟೋ ರಿಕ್ಷಾಗಳ ಸೈಲೆನ್ಸರ್‌ಗಳನ್ನು

ಮಾರ್ಪಡಿಸುವುದು, ಹೀಗೆ ಹಲವು ಕಾರಣಗಳಿಂದ ಉಂಟಾಗುತ್ತದೆ. ಹೆಚ್ಚುತ್ತಿರುವ ಶಬ್ದ ಮಾಲಿನ್ಯವನ್ನು ಗಮನದಲ್ಲಿಟ್ಟುಕೊಂಡು ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯು ಬೆಂಗಳೂರು ನಗರದ ಪ್ರಮುಖ 30 ಸಾರಿಗೆ ಸೇರಿಕೆಗಳಲ್ಲಿ ಶಬ್ದದ ಮಟ್ಟವನ್ನು ಅಧ್ಯಯನ ಮಾಡಲಾಗಿದೆ.

ಹೀಗೆ ಶಬ್ದದ ಮಟ್ಟವು ನಿಗದಿತ ಗುಣಮಾನಕಗಳನ್ನು ಮೀರಿರುವ ಕೆಲವು ಸಾರಿಗೆ ಸೇರಿಕೆಗಳಲ್ಲಿ ಶಬ್ದದ ಮಟ್ಟವನ್ನು ಕಡಿಮೆಗೊಳಿಸುವ ಉದ್ದೇಶದಿಂದ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯು ಸಾರಿಗೆ ಇಲಾಖೆಗೆ ಸೂಕ್ತ ಕ್ರಮ ಕೈಗೊಳ್ಳಬೇಕೆಂದು ಕೋರಿ ಪತ್ರ ಬರೆದಿದೆ. ಬೆಂಗಳೂರಿನ 5 ಪ್ರಮುಖ ಸ್ಥಳಗಳಲ್ಲಿ ವಾತಾವರಣದ ಗಾಳಿಯ ಮಾಲಿನ್ಯಕಾರಕಗಳನ್ನು ಮಾಪನ ಮಾಡಿ ಸರ್ಕಾರಕ್ಕೆ ಸೂಕ್ತ ಸಲಹೆಗಳನ್ನು ನೀಡಲಾಗಿದೆ. ವಾಹನಗಳಿಂದುಂಟಾಗುತ್ತಿರುವ ಮಾಲಿನ್ಯ ನಿಯಂತ್ರಿಸಲು ಸೂಕ್ತ ಕ್ರಮ ತೆಗೆದುಕೊಳ್ಳಬೇಕೆಂದು ಸಾರಿಗೆ ಇಲಾಖೆಗೆ ನಿರ್ದೇಶನ ನೀಡಲಾಗಿದೆ. ಆಹಾರ ಮತ್ತು ನಾಗರೀಕ ಸರಬರಾಜು ಇಲಾಖೆಗೂ ಸಹ ಕಲಬೆರಕೆ ಇಂಧನ ಒದಗಿಸುವವರ ಮೇಲೆ ಸೂಕ್ತ ಕ್ರಮ ಜರುಗಿಸಲು ನಿರ್ದೇಶನವನ್ನು ನೀಡಲಾಗಿದೆ.

ಆ) ಆಸ್ಪತ್ರೆ, ನರ್ಸಿಂಗ್ ಹೋಂ ಮತ್ತು ಇತರೆ ಆರೋಗ್ಯ ಕೇಂದ್ರಗಳಿಂದ ಪರಿಸರ ಮಾಲಿನ್ಯವಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆ.

ಸದರಿ ಕೇಂದ್ರಗಳಲ್ಲಿ ಉತ್ಪತ್ತಿಯಾಗುತ್ತಿರುವ ಜೀವ ವೈದ್ಯಕೀಯ ತ್ಯಾಜ್ಯ ವಸ್ತುಗಳನ್ನು ಸಮರ್ಪಕವಾಗಿ ನಿರ್ವಹಣೆ ಮಾಡದೆ ಇರುವುದರಿಂದ ಹಾಗೂ ಇಂತಹ ತ್ಯಾಜ್ಯ ವಸ್ತುಗಳನ್ನು ಮುನಿಸಿಪಲ್ ಘನ ತ್ಯಾಜ್ಯ ವಸ್ತುಗಳ ಜೊತೆಯಲ್ಲಿ ಅಸಮರ್ಪಕ ನಿರ್ವಹಣೆ ಮಾಡುವುದರಿಂದಲೂ ಸಹ ಪರಿಸರ ಮಾಲಿನ್ಯವಾಗುತ್ತಿದೆ.

ಭಾರತ ಸರ್ಕಾರದ ಪರಿಸರ ಮಂತ್ರಾಲಯವು ದಿನಾಂಕ. 20-7-98ರಲ್ಲಿ ಜಾರಿಗೆ ತಂದಿರುವ BIO-MEDICAL WASTE (MANAGEMENT AND HANDLING) RULES 1998ರ ಅಡಿಯಲ್ಲಿ ರಾಜ್ಯ ಸರ್ಕಾರವು ಸದರಿ ನಿಯಮಗಳನ್ನು ದಿನಾಂಕ.23-4-99 ರಿಂದ ಜಾರಿಗೆ ತಂದಿದೆ. ಈಗಾಗಲೇ ಸದರಿ ತ್ಯಾಜ್ಯ ವಸ್ತುಗಳ ನಿರ್ವಹಣೆ ವಿಷಯದಲ್ಲಿ ಕ್ರಮ ಜರುಗಿಸಿದ್ದು, ಆಸ್ಪತ್ರೆ, ನರ್ಸಿಂಗ್ ಹೋಂ ಇತರೆ ಆರೋಗ್ಯ ಕೇಂದ್ರಗಳು ಸದರಿ ನಿಯಮದ ಅಡಿಯಲ್ಲಿ ರಚಿಸಲಾಗಿರುವ ಪ್ರಾಧಿಕಾರದಿಂದ ಅನುಮತಿ ಪಡೆಯಬೇಕಾಗಿದೆ. ಹಾಗೂ ಈ ಪತ್ರದಲ್ಲಿ ವಿವರಿಸಿರುವ ರೀತಿಯಲ್ಲಿ ತ್ಯಾಜ್ಯ ವಸ್ತುಗಳನ್ನು ನಿರ್ವಹಣೆ ಮಾಡಬೇಕಾಗಿದೆ. ರಾಜ್ಯದಲ್ಲಿ 1600 ಆರೋಗ್ಯ ಕೇಂದ್ರಗಳನ್ನು ಗುರುತಿಸಲಾಗಿದ್ದು, 250 ಆರೋಗ್ಯ ಕೇಂದ್ರಗಳಿಗೆ ಪರವಾನಿಗೆ ನೀಡಲಾಗಿದೆ. ಪರವಾನಿಗೆ ಪಡೆಯಲು ಅರ್ಜಿ ಸಲ್ಲಿಸದೇ ಇರುವ ಆರೋಗ್ಯ ಕೇಂದ್ರಗಳಿಗೆ ಕಾರಣ ಕೇಳುವ ನೋಟೀಸನ್ನು ಜಾರಿ ಮಾಡಲಾಗಿದೆ. ಸದರಿ ನಿಯಮದಲ್ಲಿ ವಿವರಿಸಿದಂತೆ 30 ಲಕ್ಷ ಜನಸಂಖ್ಯೆಗಿಂತಲೂ ಹೆಚ್ಚಾಗಿರುವ

ಪಟ್ಟಣ ಪ್ರದೇಶಗಳಲ್ಲಿ ಬರುವ ಎಲ್ಲಾ ಆರೋಗ್ಯ ಕೇಂದ್ರಗಳು ದಿನಾಂಕ. 31- 12- 99ರ ಒಳಗೆ ವೈಜ್ಞಾನಿಕ ರೀತ್ಯಾ ನಿರ್ವಹಣೆ ಮಾಡಬೇಕಾಗಿದೆ. ಅಲ್ಲದೆ, ಯಾವುದೇ ಪಟ್ಟಣ ಪ್ರದೇಶದಡಿಯಲ್ಲಿ ಬರುವ 500 ಹಾಸಿಗೆಗಳಿಗಿಂತಲು ಹೆಚ್ಚು ಹಾಸಿಗೆ ಹೊಂದಿರುವ ಆರೋಗ್ಯ ಕೇಂದ್ರಗಳು ಸಹ ದಿನಾಂಕ 31- 12- 99 ಒಳಗೆ ವೈಜ್ಞಾನಿಕ ರೀತ್ಯಾ ನಿರ್ವಹಣೆ ಮಾಡಬೇಕಾಗಿರುತ್ತದೆ.

ಬೆಂಗಳೂರು ನಗರದಲ್ಲಿ ಈಗಾಗಲೇ ಕೆಲವು ಪ್ರಮುಖ ಕೇಂದ್ರಗಳಲ್ಲಿ INCINERATOR ಅಳವಡಿಸಿದೆ. ಪ್ರಾಧಿಕಾರವು ಸಮರ್ಪಕ ನಿರ್ವಹಣೆಯ ದೃಷ್ಟಿಯಿಂದ ಬೆಂಗಳೂರಿನಲ್ಲಿ ಕ್ರೋಢಿಕೃತ ನಿರ್ವಣೆ ಕೇಂದ್ರವನ್ನು ಸ್ಥಾಪಿಸುವ ಯೋಜನೆಯಿಂದ ಬೆಂಗಳೂರು ನಗರಪಾಲಿಕೆಯಿಂದ 5 ಎಕರೆ ಸ್ಥಳವನ್ನು ಕೇಳಿದೆ. ಹಾಗೆ ಎಲ್ಲಾ ಜಿಲ್ಲಾ ಕೇಂದ್ರಗಳಲ್ಲಿಯೂ ಕ್ರೋಢೀಕೃತ ನಿರ್ವಹಣಾ ಕೇಂದ್ರವನ್ನು ಸ್ಥಾಪಿಸುವ ಸೂಚನೆಯನ್ನು ಸದರಿ ಜಿಲ್ಲಾಧಿಕಾರಿಗಳಿಗೆ ಕಳುಹಿಸಲಾಗಿದೆ. ಹಾಗೂ ಜಿಲ್ಲಾಧಿಕಾರಿಗಳಿಗೆ ಸ್ಥಳವನ್ನು ಗುರುತಿಸಲು ನಿರ್ದೇಶಿಸಲಾಗಿದೆ.

ಕಮಲಾಪುರ ಕ್ಷೇತ್ರದ ಹೆದ್ದಾರಿಗಳ ದುರಸ್ತಿ.

80(221)

ಶ್ರೀ ರೇವು ನಾಯಕ್ ಬೆಳಮಗಿ (ಕಮಲಪೂರೆ): ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ತಿಳಿಸುವರೆ?

ಅ) ಗುಲ್ಬರ್ಗಾ ಜಿಲ್ಲೆಯ ಕಮಲಾಪುರ ಕ್ಷೇತ್ರದ ಅಳಂದ-ತಲಿಕುಣಿ-ಕೀಣಸುಲ್ತಾನ್ ಹಾಗೂ ಅಳಂದ-ಉಮ್ಮರಗ ರಾಜ್ಯ ಹೆದ್ದಾರಿ ಸಂಪೂರ್ಣವಾಗಿ ಹಾಳಾಗಿದ್ದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ, ಈ ರಸ್ತೆಗಳ ದುರಸ್ತಿಗಾಗಿ ಯಾವಾಗ ಹಣ ಮಂಜೂರು ಮಾಡಲಾಗುವುದು?

ಶ್ರೀ ಧರ್ಮಸಿಂಗ್ (ಲೋಕೋಪಯೋಗಿ ಸಚಿವರು):

ಅ) ಈ ರಾಜ್ಯ ಹೆದ್ದಾರಿಗಳು ಹಲವೆಡೆ ಹಾಳಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆ.

ಆ) ವಾರ್ಷಿಕ ಅನುದಾನದಲ್ಲಿ ಈಗಾಗಲೇ ದುರಸ್ತಿ ಕಾರ್ಯ ಕೈಗೊಳ್ಳಲಾಗಿದೆ. ಅಲ್ಲದೇ 75.00 ಕೋಟಿ ರೂ.ಗಳ (ಯೋಜನೆ) ಅಡಿಯಲ್ಲಿ ರಾಜ್ಯ ಹೆದ್ದಾರಿ ಮತ್ತು ಜಿಲ್ಲಾ ಮುಖ್ಯ ರಸ್ತೆ ಸುಧಾರಣೆ ಕಾರ್ಯಕ್ರಮದಡಿಯಲ್ಲಿ ಉಮರ್ಗಾ-ಅಳಂದ